ನಾಯಕರು ನನ್ನ ಜೊತೆಯಲ್ಲಿ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಹೆಚ್ಚು ಜನ ರೋಗಿಗಳು ಅಲ್ಲಿ ಬರುತ್ತಿದ್ದಾರೆ. ಅಲ್ಲಿ ಕೊಡುತ್ತಾ ಇರತಕ್ಕ ಹಣ ಸಾಕಾಗುವುದಿಲ್ಲ ಎಂದು. ಸರ್ಕಾರದ ಆದೇಶ ಇದೆ. ಪಿ.ಎಚ್.ಸಿಗೆ ಕಮ್ಯುನಿಟಿ ಹೆಲ್ತ್ ಸೆಂಟರ್‌ಗೆ ಮತ್ತು ತಾಲ್ಲೂಕು ಆಸ್ಪತ್ರೆಗೆ ಇಷ್ಟಿಷ್ಟೇ ನಿಗಧಿಯಾದಂಥ ಹಣ ಕೊಡಬೇಕೆಂದಿದೆ. ಆದರೂ ಕೂಡ ಮಾನ್ಯ ವಿರೋಧಪಕ್ಷದ ನಾಯಕರು ನನಗೆ ದೂರವಾಣಿ ಮೂಲಕ ಯಾವುದಾದರೂ ರೂಪದಲ್ಲಿ ಹೆಚ್ಚು ಔಷಧಿಯನ್ನು ಕೊಡಬೇಕೆಂದು ನನ್ನನ್ನು ಕೇಳಿದ್ದಾರೆ. ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಮತ್ತು ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ.....

ಶ್ರೀ ಹೆಚ್.ಶಿವಪ್ಪ:- ವಿರೋಧಪಕ್ಷದ ಕ್ಷೇತ್ರಗಳಿಗೆ ರೂಲ್ಸ್‌ಗಳನ್ನು ರಿಲ್ಯಾಕ್ಸೇಷನ್ ಮಾಡಿದ್ದೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಷುಗರ್ ಫ್ಯಾಕ್ಟರಿ ನಡೆಸಿಕೊಂಡು ನೆಮ್ಮದಿಯಿಂದ ಇದ್ದೀರಿ. ನಮ್ಮ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಳ್ಳಿ.

ಅಧ್ಯಕ್ಷರು:- ಶಿವಪ್ಪನವರೇ, ನಿಮಗೇನು ಸಂಬಂಧ ಇದೆ ಇದು?

ಡಾ. ಎಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ರಾಜ್ಯದ ಆಸ್ಪತ್ರೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಬೇಕಾದ ವಿಶ್ವಬ್ಯಾಂಕಿನ ಯೋಜನೆಯನ್ನು ಈಗಾಗಲೇ ಪ್ರಧಾನಮಂತ್ರಿಗಳು ಉದ್ಘಾಟನೆ ಮಾಡಿ ಹೋಗಿದ್ದಾರೆ. ರಾಜ್ಯದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಮೂರು ಹಂತಗಳಲ್ಲಿ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಮೊದಲನೇ ಹಂತದಲ್ಲಿ ಇಷ್ಟು ಎಂದು ಮಾಡಿದ್ದೇವೆ. ಸನ್ಮಾನ್ಯ ವಿರೋಧಿಪಕ್ಷದ ನಾಯಕರ ಕ್ಷೇತ್ರದಲ್ಲೂ ಕೂಡ ಅಂಥದ್ದೇ ಕೆಲಸವನ್ನು ಮಾಡಿದರೂ ಕೂಡ 1997-98ನೇ ಸಾಲಿಗೆ ಅದು ಸೇರ್ಪಡೆಯಾಗಿದೆ. ಅದನ್ನು ಸ್ವಲ್ಪ ಬೇಗ ಮಾಡಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ಎಲ್ಲರೂ ಕೂಡ ಅದೇ ತರಹ ಹೇಳಿದರೆ ಕೆಲಸವನ್ನು ಮಾಡುವುದು ಕಷ್ಟವಾಗುತ್ತದೆ.

ಅಧ್ಯಕ್ಷರು:- ಅವರಿಗೆ ಆದ್ಯತೆ ಕೊಡಿ.

ಡಾ.ಎಚ್.ಸಿ.ಮಹದೇವಪ್ಪ:- ಆದರೂ ವಿರೋಧಪಕ್ಷದ ನಾಯಕರು ಹೇಳಿರುವುದರಿಂದ ಅದನ್ನು ಪರಿಶೀಲಿಸಿ ವಿಶೇಷವಾಗಿ ಎಂದು ಪರಿಗಣನೆ ಮಾಡಿ ಮಾಡುತ್ತೇನೆ.

ವಿಷಯ:- ವಿಜಾಪುರ ಜಿಲ್ಲೆಯ ಆಲಮಟ್ಟಿಯ ಜವಹರ ನವೋದಯ ಶಾಲೆಯಲ್ಲಿ ಉಪನ್ಯಾಸಕರ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 52 (42)

ಶ್ರೀ ಬಸವನಗೌಡ ರಾ.ಪಾಟೀಲ್ (ಬಿಜಾಪುರ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಜಾಪುರ ಜಿಲ್ಲೆಯ ಆಲಮಟ್ಟಿ ಜವಹರ ನವೋದಯ ಶಾಲೆಯಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಆಲಮಟ್ಟಿ ಜವಹರ ನವೋದಯ ಶಾಲೆಯಲ್ಲಿ ಈ ಕೆಳಗೆ ಕಾಣಿಸಿದ ವಿಷಯಗಳ ಉಪನ್ಯಾಸಕರ ಕೊರತೆ ಇದೆ ಎಂದು ತಿಳಿದು ಬಂದಿದೆ:

1. ಭೌತಶಾಸ್ತ್ರ - 1
2. ರಸಾಯನಶಾಸ್ತ್ರ - 1
3. ಗಣಿತ ಶಾಸ್ತ್ರ - 1
4. ಸಮಾಜ ಶಾಸ್ತ್ರ - ½

ಜವಹರ ನವೋದಯ ಶಾಲೆಯು ಕೇಂದ್ರ ಸರ್ಕಾರಕ್ಕೆ ಒಳಪಟ್ಟಿರುವುದರಿಂದ ಸದರಿ ಶಾಲೆಯ ಪ್ರಾಚಾರ್ಯರು ನವೋದಯ ವಿದ್ಯಾಲಯ ಸಮಿತಿ ಸಿಕಂದರಾಬಾದ್‌ಗೆ ಉಪನ್ಯಾಸಕರ ಕೊರತೆ ಬಗ್ಗೆ ತಿಳಿಸಿರುತ್ತಾರೆ ಎಂದು ತಿಳಿದು ಬಂದಿದೆ.

ಆ) ರಾಜ್ಯ ಸರ್ಕಾರದ ಇದರ ಬಗ್ಗೆ ಸಿಕಂದರಬಾದ್‌ನಲ್ಲಿರುವ ವಿಭಾಗೀಯ ಕಛೇರಿಯಿಂದ ನವೋದಯ ವಿದ್ಯಾಲಯ ಸಮಿತಿಗೆ ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಪಡಿಸುವುದು.

ಶ್ರೀ ಬಸವನಗೌಡ ಆರ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರದಲ್ಲಿ ತಿಳಿಸಿದ್ದಂತೆ ನಾಲ್ಕು ವಿಷಯಗಳಲ್ಲಿ ಉಪನ್ಯಾಸಕರ ಕೊರತೆ ಇರುವುದನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಇದು ಕೇಂದ್ರ ಸರ್ಕಾರಕ್ಕೆ ಒಳಪಟ್ಟಿರುವುದರಿಂದ ಇದರ ಬಗ್ಗೆ ಪ್ರಾಚಾರ್ಯರು ತಿಳಿಸಿದ್ದಾರೆ ಎಂದು ಹೇಳಿದ್ದಾರೆ. ಆದರೆ ಈ ಒಂದು ಕೊರತೆಯಿಂದ ವಿಶೇಷವಾಗಿ ಭೌತಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲಿ ವಿದ್ಯಾರ್ಥಿಗಳ ಅಭ್ಯಾಸದ ಮೇಲೆ ದುಷ್ಪರಿಣಾಮ ಆಗುತ್ತಿದೆ. ಸರ್ಕಾರ ಆದಷ್ಟು ಶೀಘ್ರ ಸಂಬಂಧಿಸಿದ.....

ಅಧ್ಯಕ್ಷರು:- ತಾವು ಉತ್ತರವನ್ನು ಪೂರ್ಣ ಓದಿಕೊಂಡಿಲ್ಲ.

ಶ್ರೀ ಬಸವನಗೌಡ ಆರ್.ಪಾಟೀಲ್:- ಓದಿಕೊಂಡಿದ್ದೇನೆ ಅಧ್ಯಕ್ಷರೆ.

ಅಧ್ಯಕ್ಷರು:- ಓದಿಕೊಳ್ಳಲಿಲ್ಲ. ಇದು ಕೇಂದ್ರಸರ್ಕಾರದ ವ್ಯಾಪ್ತಿಗೆ ಬರುತ್ತಕ್ಕಂಥದ್ದು.

ರಾಜ್ಯಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ. ಕೇಂದ್ರಸರ್ಕಾರಕ್ಕೆ ಸಿಕಂದರಾಬಾದ್‌ಗೆ ಈಗಾಗಲೇ ಅವರು ಪತ್ರ ಬರೆದಿದ್ದಾರೆ. ಆದ್ದರಿಂದ ನೀವು ಏನು ಒತ್ತಾಯ ಮಾಡಬೇಕಾದರೂ ಮತ್ತೊಮ್ಮೆ ಸಂಬಂಧಪಟ್ಟವರಿಗೆ ಎಚ್ಚರಿಕೆ ಕೊಟ್ಟು ಬೇಗ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ವಿನಂತಿ ಮಾಡಿಕೊಳ್ಳಬಹುದು. ಇವರು ಉತ್ತರ ಏನು ಹೇಳುತ್ತಾರೆ ಪಾಪ. ನೀವು (ಮಂತ್ರಿಗಳಿಗೆ) ದಯಮಾಡಿ ಕೇಂದ್ರಸರ್ಕಾರಕ್ಕೆ ಬರೆದು ಸಿಕಂದರಾಬಾದ್‌ನಲ್ಲಿರುವ ಡಿವಿಷನಲ್ ಆಫೀಸಿಗೆ ತಕ್ಷಣ ಆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕಾದುದನ್ನು ತಾವೇ ಹೇಳಿದ್ದೀರಿ. ಸಂಬಂಧಪಟ್ಟವರಿಗೆ ಬರೆದು ಅದನ್ನು ತಿಳಿಸುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಜವಾಹರ್ ನವೋದಯ ಶಾಲೆಯಲ್ಲಿ ಡೆಪ್ಯುಟಿ ಕಮಿಷನರನ್ನು ಸೂಪರ್‌ವೈಸರಾಗಿ ತಾವು ನೇಮಿಸಿದ್ದೀರಿ. ಆದರೆ ನ್ಯೂನತೆಗಳನ್ನು ಮತ್ತು ಸಮಸ್ಯೆಗಳನ್ನು ಇತ್ಯರ್ಥಪಡಿಸುವುದಕ್ಕೆ ಯಾರಾದರೂ ನಮ್ಮ ರಾಜ್ಯ ಸರ್ಕಾರದಿಂದ ಅಧಿಕಾರಿಗಳು ಇರಲೇಬೇಕಲ್ಲಾ. ನೇರವಾಗಿ ಯಾರೂ ಕೂಡ ಅವರನ್ನು ಪ್ರಶ್ನೆ ಮಾಡುತ್ತಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಏನಾದರೂ ಅಧಿಕಾರ ಕೊಟ್ಟು ತಾವು ಆ ಕಾರ್ಯನಿರ್ವಹಣೆ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಹೆಚ್.ಸಿ.ಗೋವಿಂದೇಗೌಡ:- ಅಧ್ಯಕ್ಷರೆ, ನನಗೆ ತಿಳಿದಿರುವ ಹಾಗೆ ನವೋದಯ ಶಾಲೆಗಳು ನಮ್ಮ ರಾಜ್ಯದ ಯಾವಯಾವ ಜಿಲ್ಲೆಗಳಲ್ಲಿ ನಡೆಯುತ್ತವೆ ಅದರ ಮೇಲ್ವಿಚಾರಣೆ ನೋಡತಕ್ಕ ಜವಾಬ್ದಾರಿ ಜಿಲ್ಲಾಧಿಕಾರಿಗಳಿಗೆ ಸಂಬಂಧಪಟ್ಟಿರತಕ್ಕದ್ದು. ನಮ್ಮ ಇಲಾಖೆಗೆ ಸಂಬಂಧಪಡದಿದ್ದರೂ ವಿದ್ಯಾ ಇಲಾಖೆ ಅಂದಮೇಲೆ ನಾವೂ ಅದರ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ತಾವು ಏನು ಕ್ವೆಶ್ಚನ್ಸ್ ಕಳುಹಿಸಿದ್ದೀರಿ ಅದನ್ನು ಕಳುಹಿಸಿದ ಮೇಲೆ ನಾವು ಅವರಿಗೆ ಬರೆದು ಏನೇನಾಗಿದೆ ಅದು ಏತಕ್ಕೆ ಕಡಿಮೆ ಇದೆ ಎಂದು ಹೇಳಿ ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಅವರು ನಾಲ್ಕು ಖಾಲಿ ಇರುವುದನ್ನು ಕೊಟ್ಟಿದ್ದಾರೆ. ನಾವು ಈಗಾಗಲೇ ಬರೆಸಿದ್ದೇವೆ. ಖಾಲಿ ಇರುವುದನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಿ ಎಂದು. ಸಿಕಂದರಾಬಾದ್‌ನಲ್ಲಿ ಇದರ ವ್ಯವಸ್ಥೆ ಇರತಕ್ಕದ್ದು. ಸಿಕಂದರಾಬಾದಿಗೆ ಬರೆದಿದ್ದೇವೆ. ಚಿಮ್ಮನಕಟ್ಟಿಯವರು ಏನು ಹೇಳಿದ್ದೀರೀ ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಜಾಗ್ರತೆಯಾಗಿ ವ್ಯವಸ್ಥೆ ಮಾಡಿ ಎಂದು ಹೇಳುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಒಂದು ವರ್ಷದಲ್ಲಿ ಒಂದು ಮೀಟಿಂಗೂ ಮಾಡುವುದಿಲ್ಲ ಅಧ್ಯಕ್ಷರೆ. ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ಕಾಳಜಿಯಿಂದ ಕಾರ್ಯನಿರ್ವಹಿಸುವಂತೆ ತಾವು ಹೇಳಬೇಕು.

ವಿಷಯ:- ಅರಕಲಗೂಡಿನ ತಾಲ್ಲೂಕಿನ ಆಸ್ಪತ್ರೆಗಳಲ್ಲಿರುವ ವೈದ್ಯಾಧಿಕಾರಿಗಳ ಕೊರತೆ.